





ಶಿಕ್ಷಕ: ಮೀನು ಇಲ್ಲದ ಬಲೆ, ಬೆಂಕಿ ಇಲ್ಲದ ಒಲೆ, ಖಾಲಿ ಇರುವ ನಿನ್ನ ತಲೆ ಇದ್ದರೆಷ್ಟು? ಬಿಟ್ಟರೆಷ್ಟು? ಇದೇ ಥರ ಒಂದು ಉದಾಹರಣೆ ಕೊಡು.

ಶಿಷ್ಯ: ಹೂವಿಲ್ಲದ ತೋಟ, ಸೌಂದರ್ಯವಿಲ್ಲದ ನೋಟ, ಅರ್ಥವಾಗದ ನಿಮ್ಮ ಪಾಠ ಕೇಳಿದರೆಷ್ಟು? ಬಿಟ್ಟರೆಷ್ಟು?

★★★

ಭಿಕ್ಷುಕ: ಮಗ ತಿನ್ನಲಿಕ್ಕೆ ಏನನ್ನಾದರೂ ಕೊಡಿ.

ಗುಂಡ: ನಿನಗೆ ಕೊಟ್ರೆ ನನಗೆ ಏನು ಸಿಗುತ್ತೆ.

ಭಿಕ್ಷುಕ: ನಿನಗೆ ಸ್ವರ್ಗ ಸಿಗುತ್ತೆ

ಗುಂಡ: ನಿಂಗೆ ಬೆಂಗಳೂರು ಕೊಡುತ್ತೀನಿ.

ಭಿಕ್ಷುಕ: ಬೆಂಗಳೂರು ಏನು ನಿಂದಾ?

ಗುಂಡ: ಮತ್ತೆ ಸ್ವರ್ಗ ಏನು ನಿಮ್ಮಪ್ಪಂದಾ?

(ಸಂಗ್ರಹ) **ಕೆ.ಎಸ್. ನೀತಾ, ಹಾಸನ**

ಸುರೇಶ್ ತನ್ನ ಗರ್ಲ್ ಫ್ರೆಂಡಿನೊಂದಿಗೆ ರೆಸ್ಟೋರೆಂಟಿನಲ್ಲಿ ಕೂತಿದ್ದ. ಮಾತಿನ ಮಧ್ಯೆ ಅವಳು ಹೇಳಿದಳು. 'ಚಮತ್ಕಾರಗಳೂ ನಡೆಯುತ್ತವೆ ಎಂಬ ಬಗ್ಗೆ ನಿನಗೆ ನಂಬಿಕೆಯಿಲ್ವಾ?'

'ಖಂಡಿತ ನಡೆಯುತ್ತವೆ... ಒಮ್ಮೆ ನಾನು ಜೀವನದಲ್ಲಿ ಜುಗುಪ್ಸೆಗೊಂಡು ನದಿಗೆ ಹಾರಲು ಹೋದೆ. ನದಿಯ ದಡದಲ್ಲಿ ಹೋಗುತ್ತಿರುವಾಗ ಒಂದು ಖಾಲಿ ಬಾಟಲಿ ಸಿಕ್ಕಿತು. ಅದರಲ್ಲಿ ಹೊಗೆಯಂಥ ವಸ್ತುವಿತ್ತು. ನಾನು ಅದರ ಮುಚ್ಚಳ ತೆಗೆದಾಗ ಅದರಿಂದ ಜಿನ್ ಬಂದು ಹೇಳಿದ, 'ನೀನು ಎಷ್ಟೋ ವರ್ಷಗಳ ನಂತರ ನನ್ನನ್ನು ಮುಕ್ತಗೊಳಿಸಿದ್ದೀಯ. ಇದಕ್ಕೆ ಪ್ರತಿಯಾಗಿ ನಾನು ನಿನಗೇನಾದರೂ ಕೊಡಲು ಬಯಸುತ್ತೇನೆ. ನೀನು ಒಳ್ಳೆಯ ನೆನಪಿನ ಶಕ್ತಿಯನ್ನು ಬೇಡಿಕೋ ಅಥವಾ ಬೇಕಾದಷ್ಟು ಹಣವನ್ನು ಬೇಡಿಕೋ.'

'ನೀನೇನು ಬೇಡಿಕೊಂಡೆ?' ಗರ್ಲ್ ಫ್ರೆಂಡ್‌ಗೆ ಕುತೂಹಲವಾಯಿತು.

'ನೆನಪಿಲ್ಲ, ತುಂಬಾ ಹಿಂದಿನ ಘಟನೆ ಅಲ್ವಾ!'

★★★

ರಮಾನಾಥ ಸಂಜೆ ಕಚೇರಿಯಿಂದ ಮನೆಗೆ ಬಂದಾಗ ಹೆಂಡತಿ ಹಾಸಿಗೆಯಲ್ಲಿ ಮಲಗಿದ್ದಳು.

'ಚೆನ್ನಾಗಿದ್ದೀಯಲ್ವಾ?' ಹೆಂಡತಿಯನ್ನು ರಮಾನಾಥ ವಿಚಾರಿಸಿದ.

'ಆಯಾಸವಾಗಿದೆ, ಅದಕ್ಕೇ ರೆಸ್ಟ್ ತಗೊಳ್ತಿದ್ದೀನಿ.'

'ನಾನು ಮೊದಲಿನಿಂದಲೂ ಕೆಲಸದವಳನ್ನು ನೇಮಿಸಿಕೋ ಅಂತ ಹೇಳ್ತಲೇ ಇದ್ದೀನಿ. ಆದ್ರೆ ನೀನು ನನ್ನ ಮಾತನ್ನು ಕೇಳುವುದೇ ಇಲ್ಲ.'

'ನಾನೆಂದೂ ಕೆಲಸದವಳನ್ನು ಇಟ್ಕೊಳ್ಳೋದಿಲ್ಲ.'

'ಯಾಕೆ ಅಂತ?'

'ಮದುವೆಗೆ ಮೊದಲು ನಾನೂ ಈ ಮನೆಯಲ್ಲಿ ಕೆಲಸದವಳೇ ಆಗಿದ್ದೆ ಅನ್ನೋದನ್ನು ಮರೆತು ಬಿಟ್ಟಿರಾ?'

(ಸಂಗ್ರಹ) **ಡಿ.ಎನ್. ಶ್ರೀನಾಥ್, ಶಿವಮೊಗ್ಗ**

ಒಬ್ಬ: ತತ್ತಿಯಿಂದ ಮರಿಗಳು ಹೊರಬರುತ್ತವೆ ಎಂಬುದು ಆಶ್ಚರ್ಯದ ಸಂಗತಿ ಅಲ್ಲವಾ?

ಇನ್ನೊಬ್ಬ: ಅದಕ್ಕಿಂತ ಆಶ್ಚರ್ಯಕರ ಸಂಗತಿ ಎಂದರೆ ಅವು ತತ್ತಿ ಒಳಗೆ ಹೇಗೆ ಹೋದವು ಎಂಬುದು.

★★★

ಒಬ್ಬ: ವಸ್ತುಗಳ ಬೆಲೆ ಹೆಚ್ಚಾಗ ತೊಡಗಿದೆ. ಇನ್ನೂ ಹೆಚ್ಚಾದರೆ ಏನು ಮಾಡುವುದು ಮಾರಾಯಾ?

ಇನ್ನೊಬ್ಬ: ಅದಕ್ಯಾಕೆ ಚಿಂತಿಸುವೆ. ಬೆಲೆ ಇಳಿಯುವವರೆಗೆ ಹೆಂಡತಿ ಮಕ್ಕಳನ್ನು ಮಾವನ ಮನೆಗೆ ಕಳುಹಿಸಿದರೆ ಆಯಿತು.

★★★

ನಾಲ್ಕು ಎಳೆಗರುಗಳು. ಒಂದು ಒಕ್ಕಲಿಗರ ಮನೆ ಕರು. ಎರಡನೆಯದು ಬ್ರಾಹ್ಮಣರ ಮನೆ ಕರು. ಮೂರನೆಯದು ಗೌಳಿಗರ ಮನೆ ಕರು. ನಾಲ್ಕನೆಯದು ಡೇರಿ ಫಾರಂ ಕರು. ಇವು ತಪ್ಪಿಸಿಕೊಂಡು ಹುಲ್ಲುಗಾವಲಿಗೆ ಬಂದವು. ಹುಲ್ಲು ಸಿಕ್ಕಾಪಟ್ಟೆ ಇದೆ. ಮೇಯುತ್ತಿದ್ದರೆ 'ತಾಯಿ ಹಾಲು ನೆನಪಾಗಲ್ಲ' ಎಂದಿತು ಒಂದನೇ ಕರು. 'ತಾಯಿ ಮೊಲೆಯಲ್ಲಿ ಅಷ್ಟೊಂದು ಹಾಲು ಬರುತ್ತಾ' ಎಂದಿತು ಎರಡನೇ ಕರು. 'ತಾಯಿಯ ಮೊಲೆಯಲ್ಲಿ ಹಾಲು ಇರುತ್ತಾ?' ಎಂದಿತು ಗೌಳಿಗರ ಕರು. 'ತಾಯಿ! ಹಾಗೆಂದರೇನು' ಎಂದಿತು ನಾಲ್ಕನೇ ಕರು.

(ಸಂಗ್ರಹ) **ಮಹಾಂತೇಶ ಎಸ್. ಪಾಟೀಲ ಹುನಗುಂದ**


